# <u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

## <u>ಕೆ.ಆರ್.ನಗರ</u>

## <u>ಒಎಸ್  183/2021</u>

**<u>ಪಿಡಬ್ಲ್ಯೂ 1</u>**

**<u>ಸಾಕ್ಷಿಯನ್ನು ದಿನಾಂಕ 09.08.2023 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಬಿ.ಆರ್.ವಿ ವಕೀಲರಿಂದ ಪ್ರತಿವಾದಿಗಳ  ಪರ ವಕೀಲರುಃ</u>**

ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.  ನನಗೆ ಓದಲು ಬರೆಯಲು ಬರುತ್ತದೆ.  1 ಮತ್ತು 2 ನೇ ಪ್ರತಿವಾದಿ ನಮ್ಮ ಸಂಬಂಧಿಕರಲ್ಲ ನಮ್ಮ ಊರಿನವರು. ನಮ್ಮ ಊರು ಸಾಲಿಗ್ರಾಮ. ನನಗೆ ಒಂದು ಹೆಣ್ಣು 2 ಗಂಡು ಮಕ್ಕಳು. ನಾನು ನನ್ನ ಮಕ್ಕಳ ಜೊತೆ ವಾಸವಿದ್ದೇನೆ.  ನಾನು ನಮ್ಮ ಮನೆಯ ಕೆಲಸ ಹಾಗೂ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ 5 ಎಕರೆ ಜಮೀನಿದೆ. ಹಾಗೂ ಅಡಿಕೆ ತೋಟ ಮತ್ತು ಹೊಲ ಇದೆ. ವ್ಯವಸಾಯದಿಂದ ಆದಾಯ ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯವಿಲ್ಲ.  ನನಗೆ ವರ್ಷಕ್ಕೆ ವ್ಯವಸಾಯದಿಂದ ಸುಮಾರು ಎರಡೂವರೆ ಲಕ್ಷ ಆದಾಯವಿದ್ದು ಅದರಲ್ಲಿ ಸುಮಾರು 30 ಸಾವಿರ ಖರ್ಚಿದೆ.  ಸದರಿ ಆದಾಯ ನನಗೂ ಹಾಗೂ ನಮ್ಮ ಕುಟುಂಬದವರಿಗೆ ಹಂಚಿಕೆ ಆಗುತ್ತದೆ ಎಂದರೆ ಸರಿ.  ಎರಡೂವರೆ ಲಕ್ಷ ಆದಾಯ ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ.

2. 2017 ರಲ್ಲಿ ನನಗೆ ಎರಡೂವರೆ ಲಕ್ಷ ವರ್ಷದ ಆದಾಯವಿತ್ತು. ನಮ್ಮ ಸ್ವಂತ ಮನೆ ಸಾಲಿಗ್ರಾಮದಲ್ಲಿದೆ.   ನಮ್ಮ ಮನೆಯ ವಿಸ್ತೀರ್ಣ 65 ಅಡಿ ಇದೆ. ನಮ್ಮ ಹಾಗೂ ಪ್ರತಿವಾದಿಗಳ ಮನೆ ಒಂದೇ ಬೀದಿಯಲ್ಲಿದೆ ಆದರೆ ದೂರ ದೂರವಿದೆ.  ಪ್ರತಿವಾದಿಗಳ ಮನೆ 35X15 ಅಡಿ ಇದೆ.  ಪ್ರತಿವಾದಿ 1, 2 ಮತ್ತು 4 ಒಟ್ಟಿಗೆ ಇದ್ದಾರೆ.  3 ನೇ ಪ್ರತಿವಾದಿ ಮದುವೆಯಾಗಿ ಗಂಡನ ಮನೆಯಲ್ಲಿದ್ದಾರೆ.  ಈ ದಾವಾ ಆಸ್ತಿಯಲ್ಲೇ ಪ್ರತಿವಾದಿಗಳು ವಾಸವಿರುವುದು ಎಂದರೆ ಸರಿ.

3. ನಾನು ಕಷ್ಟದಲ್ಲಿರುವವರಿಗೆ ಹಣ ಸಹಾಯ ಮಾಡುತ್ತೇನೆ ಎಂದರೆ ಸರಿ. ಬೇರೆಯವರಿಗೆ ಕಷ್ಟದಲ್ಲಿರುವಾಗ ಹಣ ನೀಡುವಂತೆ ಪ್ರತಿವಾದಿಗಳು ಕಷ್ಟ ಎಂದು ಬಂದಾಗ ಹಣ ನೀಡಿದೆ ಎಂದರೆ ಮನೆ ಇದೆ ಎಂದು ಕಾಣಿಸಿದರು ಆದ್ದರಿಂದ ಹಣ ನೀಡಿದ್ದೇನೆ ಎಂದು

ಸಾಕ್ಷಿಯು ನುಡಿಯುತ್ತಾರೆ. ನಮ್ಮ ಮನೆಯ ಬೆಲೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮನೆ ಎಷ್ಟು ಬೆಲೆ ಬಾಳುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ದಾವಾ ಸ್ವತ್ತು ಹೊರತುಪಡಿಸಿ ಬೇರೆ ಯಾವುದೇ ವಾಸದಮನೆ ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

4. ಪ್ರತಿವಾದಿಗಳು ಏನು ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗಳು ಅವರು 3 ಮತ್ತು 4 ನೇ ಪ್ರತಿವಾದಿಗಳು. 1 ಮತ್ತು 2 ನೇ ಪ್ರತಿವಾದಿಗೆ ನಾನು ಎರಡೂವರೆ ಲಕ್ಷ ಸಾಲ ಕೊಟ್ಟಿದ್ದೆ ಎಂದರೆ ಎರಡೂವರೆ ಲಕ್ಷ ಅಲ್ಲ 4 ಲಕ್ಷ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಮೊತ್ತವನ್ನು ನಾನು ನಗದು ಮೂಲಕ ನೀಡಿದ್ದೇನೆ. ಸದರಿ ಮೊತ್ತ ನನಗೆ ವ್ಯವಸಾಯದ ಆದಾಯದಿಂದ ಬಂದಿದ್ದು ಅದನ್ನು ಮನೆಯಲ್ಲಿ ಇಟ್ಟುಕೊಂಡು 1 ಮತ್ತು 2 ನೇ ಪ್ರತಿವಾದಿಗಳಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ದಾವಾ ಪ್ರತಿಯಲ್ಲಿ ಹೇಳಿಲ್ಲ ಎಂದರೆ ಸರಿ. ಅಂದು 2 ಸಾವಿರ ಮತ್ತು 500/-ನೋಟುಗಳು ಒಟ್ಟು 4 ಲಕ್ಷ ರೂಗಳನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ